ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
**KARNATAKA LEGISLATIVE ASSEMBLY, RESEARCH AND REFERENCE BRANCH**

ಪತ್ರಿಕಾ ತುಣುಕುಗಳು
**PAPER CLIPPINGS**

ಇಲಾಖೆ / ವಿಷಯ : DEPARTMENT / SUBJECT:

ಪತ್ರಿಕೆಯ ಹೆಸರು : NAME OF THE NEWS PAPER: ದಿನಾಂಕ : DATE: 27/12/20

# ಯುಪಿ ಆಯ್ತು ಈಗ ಮಧ್ಯಪ್ರದೇಶದಲ್ಲೂ ಲವ್ ಜಿಹಾದ್ ನಿಷೇಧ

## ವಿಧೇಯಕಕ್ಕೆ ಮುಖ್ಯಮಂತ್ರಿ ಶಿವರಾಜ್ ಸಂಪುಟ ಅಸ್ತು
## ಬಲವಂತದ ಮತಾಂತರಕ್ಕೆ 10 ವರ್ಷ ಜೈಲು, 1 ಲಕ್ಷ ದಂಡ

**ಭೋಪಾಲ್:** ಉತ್ತರಪ್ರದೇಶದ ಬಳಿಕ ಮಧ್ಯಪ್ರದೇಶ ಬಿಜೆಪಿ ಸರ್ಕಾರ ಕೂಡ ಲವ್ ಜಿಹಾದ್ ನಿಷೇಧ ಕಾನೂನು ಜಾರಿಗೊಳಿಸಲು ನಿರ್ಧರಿಸಿದೆ. ಈ ಕುರಿತಾದ ವಿಧೇಯಕಕ್ಕೆ ಮುಖ್ಯಮಂತ್ರಿ ಶಿವರಾಜ ಸಿಂಗ್ ಚೌಹಾಣ್ ನೇತೃತ್ವದ ಸಚಿವ ಸಂಪುಟ ಶನಿವಾರ ಸರ್ವಾನುಮತದ ಅಂಗೀಕಾರ ನೀಡಿದೆ. ಮಸೂದೆಗೆ ವಿಧಾನಸಭೆ ಒಪ್ಪಿಗೆ ನೀಡಿದರೆ ಕಾನೂನಾಗಿ ಜಾರಿಗೆ ಬರಲಿದೆ.



'ಧಾರ್ಮಿಕ ಸ್ವಾತಂತ್ರ್ಯ ಮಸೂದೆ-2020' ಹೆಸರಿನ ಈ ವಿಧೇಯಕ, ಕೇವಲ ಮದುವೆಯ ಉದ್ದೇಶಕ್ಕಾಗಿ ಮತಾಂತರಗೊಳಿಸಿದರೆ ಅಥವಾ ಇನ್ನಾವುದೋ ಕಾರಣಕ್ಕೆ ಬಲವಂತದ ಮತಾಂತರ ಮಾಡಿದರೆ 10 ವರ್ಷದವರೆಗೆ ಜೈಲು ಶಿಕ್ಷೆ ಹಾಗೂ 1 ಲಕ್ಷ ರು.ವರೆಗೆ ದಂಡ ವಿಧಿಸುವ ಅಧಿಕಾರ ನೀಡಲಿದೆ.

ಈ ಬಗ್ಗೆ ಸುದ್ದಿಗಾರರ ಜತೆ ಮಾತನಾಡಿದ ರಾಜ್ಯ ಗೃಹ ಸಚಿವ ನರೋತ್ತಮ ಮಿಶ್ರಾ, 'ಇದು ಬೆದರಿಕೆ ಮೂಲಕ ಅಥವಾ ಪ್ರಲೋಭನೆ ಮೂಲಕ ಅಥವಾ ಇನ್ನಾವುದೋ ವಂಚನೆ ಮೂಲಕ ಬಲವಂತದ ಧಾರ್ಮಿಕ ಮತಾಂತರ ನಡೆಸುವ ವಿರುದ್ಧ ಜಾರಿಗೊಳಿಸುತ್ತಿರುವ ದೇಶದಲ್ಲೇ ಅತಿ ಬಲಿಷ್ಠ ಕಾನೂನು. ಕೇವಲ ಮದುವೆಗಾಗಿ ಮತಾಂತರಗೊಳಿಸಿದರೆ ಅದನ್ನು ಅಸಿಂಧುಗೊಳಿಸುವ ಅಂಶ ಇದರಲ್ಲಿದೆ' ಎಂದು ಹೇಳಿದರು.

ಬಲವಂತದ ಮತಾಂತರ ಮಾಡುವ ವ್ಯಕ್ತಿಗಳು, ಸಂಘ-ಸಂಸ್ಥೆಗಳು ಶಿಕ್ಷೆಯ ವ್ಯಾಪ್ತಿಗೆ ಒಳಪಡಲಿವೆ. ಒಂದು ವೇಳೆ ಮತಾಂತರಕ್ಕೆ ಇಚ್ಛಿಸಿದಲ್ಲಿ 2 ತಿಂಗಳು ಮೊದಲೇ ಜಿಲ್ಲಾಡಳಿತಕ್ಕೆ ಅರ್ಜಿ ಸಲ್ಲಿಸಬೇಕು. ಸಲ್ಲಿಸದಿದ್ದರೆ ಆ ಮದುವೆ ರದ್ದಾಗಲಿದೆ. ಜತೆಗೆ 5 ವರ್ಷ ಜೈಲು ಹಾಗೂ 50 ಸಾವಿರ ರು. ದಂಡ ವಿಧಿಸಲಾಗುವುದು ಎಂಬ ಅಂಶವೂ ಮಸೂದೆಯಲ್ಲಿ ಇರಲಿದೆ ಎಂದರು.

'ಇದರಲ್ಲಿ 2 ರೀತಿಯ ಶಿಕ್ಷೆಗಳು ಇರಲಿವೆ. ಬಲವಂತದ ಮತಾಂತರ ಮಾಡಿದರೆ 1ರಿಂದ 5 ವರ್ಷ ಜೈಲು ಹಾಗೂ 25 ಸಾವಿರ ರು.ವರೆಗೆ ದಂಡ ವಿಧಿಸುವುದು ಮೊದಲನೆಯ ಪ್ರಕಾರದ ಶಿಕ್ಷೆ.

↘ 8

### ಮಸೂದೆಯಲ್ಲೇನಿದೆ?



- ಮದುವೆಯ ಉದ್ದೇಶಕ್ಕಾಗಿ ಅಥವಾ ಬಲವಂತದ ಮತಾಂತರ ನಿಷಿದ್ಧ
- ಮತಾಂತರಕ್ಕೆ ಇಚ್ಛಿಸಿದಲ್ಲಿ 2 ತಿಂಗಳು ಮೊದಲೇ ಮಾಹಿತಿ ನೀಡಬೇಕು
- ಅರ್ಜಿ ಸಲ್ಲಿಸದೆ ಮತಾಂತರಗೊಂಡು ಮದುವೆಯಾದರೆ ಅಸಿಂಧು

## ಉ.ಪ್ರ. ಲವ್ ಜಿಹಾದ್ ಕಾಯ್ದೆಯಡಿ ಒಂದೇ ತಿಂಗಳಲ್ಲಿ 35 ಜನ ಅರೆಸ್ಟ್

**ಲಖನೌ:** ಉತ್ತರ ಪ್ರದೇಶದಲ್ಲಿ ಲವ್ ಜಿಹಾದ್ ಕಾಯ್ದೆ ಜಾರಿಯಾಗಿ ಒಂದು ತಿಂಗಳು ಪೂರ್ತಿಯಾಗಿದ್ದು, ನೂತನ ಕಾನೂನಿನಡಿ ದಿನಕ್ಕೆ ಒಬ್ಬರಂತೆ ಒಂದು ತಿಂಗಳಿನಲ್ಲಿ ಈಗಾಗಲೇ 35 ಮಂದಿಯನ್ನು ಪೊಲೀಸರು ಬಂಧಿಸಿದ್ದಾರೆ. ಅಕ್ರಮ ಮತಾಂತರ ನಿಷೇಧ ಕಾಯ್ದೆ-2020 ಅನ್ನು ಸುಗ್ರೀವಾಜ್ಞೆ ರೂಪದಲ್ಲಿ ಜಾರಿ ಮಾಡಿದಾಗಿನಿಂದ ಈವರೆಗೆ 12 ಎಫ್ಐಆರ್ ದಾಖಲಿಸಲಾಗಿದೆ. ಕಾಯ್ದೆ ಜಾರಿಗೆ ಬಂದ ಮಾರನೇ ದಿನವೇ ಬರೇಲಿಯಲ್ಲಿ ಮೊದಲ ಕೇಸು ದಾಖಲಾಗಿತ್ತು. ವಿವಾಹದ ಕಾರಣಕ್ಕಾಗಿ ನಡೆಯುವ ಬಲವಂತದ ಮತಾಂತರದ ವಿರುದ್ಧ ಉತ್ತರ ಪ್ರದೇಶ ಸರ್ಕಾರ ನ.27ರಂದು ಈ ಕಾಯ್ದೆ ಜಾರಿಗೊಳಿಸಿತ್ತು. ಈ ಕಾಯ್ದೆಯಡಿ ತಪ್ಪಿತಸ್ಥರಿಗೆ ಗರಿಷ್ಠ 10 ವರ್ಷಗಳವರೆಗೆ ಜೈಲು ಶಿಕ್ಷೆ ವಿಧಿಸುವ ಅವಕಾಶವಿದೆ.